# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

## ಪಾಠ-1: ದೊಡ್ಡವರ ದಾರಿ

**ತರಗತಿ: 6ನೇ    ವಿಷಯ: ಕನ್ನಡ    ಅಂಕಗಳು : 20    ಸಮಯ : 45 ನಿಮಿಷ**

---

**I. ಸರಿಯಾದ ಉತ್ತರ ಆರಿಸಿ ಬರೆಯಿರಿ. (4 x 1 = 4 ಅಂಕಗಳು)**

1. ಸದೃಶ :____________ (ಎ. ಹೋಲಿಕೆ ಬಿ. ವ್ಯತ್ಯಾಸ ಸಿ. ಕಾಪಾಡು)
2. ಶಿಸ್ತು :- _____________(ಎ. ಜಾರು ಬಿ. ನಡತೆ ಸಿ. ಪ್ರಗತಿ)
3. ಆಕಾರ: -_____________(ಎ. ಆಧಾರ ಬಿ. ಪುಸ್ತಕ ಸಿ. ದಾರಿ)
4. ಕುಲಪತಿ :_____________ (ಎ. ಯಜಮಾನ ಬಿ. ವಿಶ್ವವಿದ್ಯಾಲಯದ ಮುಖ್ಯಸ್ಥರು ಸಿ. ಹಿರಿಯರು)

**II. ಬಿಟ್ಟ ಸ್ಥಳ ತುಂಬಿರಿ / ಹೊಂದಿಸಿ ಬರೆಯಿರಿ. (4 x 1 = 4 ಅಂಕಗಳು)**

1. ರಾಜೇಂದ್ರ ಪ್ರಸಾದರು ಮಕ್ಕಳಿಗೆ _______ ಕೊಟ್ಟರು.
2. ಪುಸ್ತಕದ ಪುಟಗಳನ್ನು ಹರಿಯುವುದು _______.
3. ಪ್ರಸಾದರು ತಾವು _______ ಸೇವಕ ಎಂದು ಹೇಳುತ್ತಿದ್ದರು.
4. ಜಾಮಿಯಾ ಮಿಲಿಯ ವಿಶ್ವವಿದ್ಯಾಲಯದ ಸ್ಥಾಪಕರು _______.

**III. ಒಂದು ವಾಕ್ಯದಲ್ಲಿ ಉತ್ತರಿಸಿ. (4 x 1 = 4 ಅಂಕಗಳು)**

1. ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ಹುಸೇನರು ಯಾವ ವೇಷ ಹಾಕಿದ್ದರು?
2. ಯಾವುದು ಒಳ್ಳೆಯ ಅಭ್ಯಾಸವಲ್ಲವೆಂದು ಪ್ರಸಾದರು ಮಕ್ಕಳಿಗೆ ಹೇಳಿದರು?
3. ಭಾರತದ ಇಂದಿನ ರಾಷ್ಟ್ರಪತಿ ಯಾರು?
4. ಜಾಕಿರ್ ಹುಸೇನ್ ರ ಆದೇಶ ಏನಾಗಿತ್ತು?

**IV. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (2 x 2 = 4 ಅಂಕಗಳು)**

1. ರಾಜೇಂದ್ರ ಪ್ರಸಾದರ ವ್ಯಕ್ತಿತ್ವವನ್ನು ವಿವರಿಸಿ.
2. ಬೆ. ಗೋ. ರಮೇಶ್ ರವರ ಕೃತಿಗಳನ್ನು ಪಟ್ಟಿ ಮಾಡಿ.

**V. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ. (1 x 4 = 4 ಅಂಕಗಳು)**

1. ಜಾಕಿರ್ ಹುಸೇನರು ಮಾಡಿದ ಉಪಾಯದಿಂದ ವಿದ್ಯಾರ್ಥಿಗಳಲ್ಲಿ ಉಂಟಾದ ಬದಲಾವಣೆಗಳೇನು?

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

## ಪಾಠ-2: ಗಂಧರ್ವಸೇನ

**ತರಗತಿ: 6ನೇ ವಿಷಯ: ಕನ್ನಡ ಅಂಕಗಳು : 20 ಸಮಯ : 45 ನಿಮಿಷ**

---

**I. ಸರಿಯಾದ ಉತ್ತರ ಆರಿಸಿ ಬರೆಯಿರಿ. (4 x 1 = 4 ಅಂಕಗಳು)**

1. ಗಂಧರ್ವ ಸೇನಾ ___________ಹೆಸರು (ಎ. ಕುದುರೆ ಬಿ. ಸಿಂಹ ಸಿ. ಕತ್ತೆ ಡಿ ಆನೆ)
2. ಇವುಗಳಲ್ಲಿ ಅಂಕಿತನಾಮಕ್ಕೆ ಉದಾಹರಣೆಯ ಪದವಿದು__
   (ಎ. ಕಾವೇರಿ ಬಿ. ಮನುಷ್ಯ ಸಿ. ವಿದ್ವಾಂಸ ಡಿ. ಹೊಸದು)
3. ಸೇವಕಿ ________ ಬುದ್ಧಿಯವಳು.
   (ಎ. ಮಂದ ಬಿ. ಚುರುಕು ಸಿ. ಅತಿ ಚುರುಕು ಡಿ. ತುಳುಕು)
4. 'ಮಗು' ಈ ಪದದ ಬಹುವಚನ ರೂಪ______
   (ಎ. ಮಕ್ಕಳು ಬಿ. ಮಗುಗಳು ಸಿ. ಮಗ ಡಿ. ಸುತ)

**II. ಹೊಂದಿಸಿ ಬರೆಯಿರಿ. (4 x 1 = 4 ಅಂಕಗಳು)**

1. ಮೂಗು ತೂರಿಸು - ಅ. ಮೋಸ ಮಾಡು
2. ಮಂಕುಬೂದಿ - ಬ. ನಂಬಿಕೆ ದ್ರೋಹ
3. ಬೆನ್ನಿಗೆ ಚೂರಿ ಹಾಕು - ಕ. ಪ್ರವೀಣ
4. ಎತ್ತಿದ ಕೈ - ಡ. ಮಧ್ಯ ಪ್ರವೇಶಿಸು

**III. ಒಂದು ವಾಕ್ಯದಲ್ಲಿ ಉತ್ತರಿಸಿ. (4 x 1 = 4 ಅಂಕಗಳು)**

1. ಮಂತ್ರಿಯು ರಾಜನಿಗೆ ಏನೆಂದು ಹೇಳಿದನು?
2. ಸೇವಕಿಯು ರಾಣಿಯನ್ನು ಏನು ಕೇಳಿದಳು?
3. ರಾಜನು ಮಂತ್ರಿಯನ್ನು ಏನೆಂದು ಪ್ರಶ್ನಿಸಿದನು?
4. ಗಂಧರ್ವ ಸೇನಾ ಯಾರು?

**IV. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (2 x 2 = 4 ಅಂಕಗಳು)**

1. ಮಂತ್ರಿ ಮತ್ತು ಪಡೆಯ ಮುಖ್ಯಸ್ಥನ ನಡುವೆ ನಡೆದ ಸಂವಾದವನ್ನು ತಿಳಿಸಿ.
2. ಗಂಧರ್ವ ಸೇನನ ವಿಷಯವನ್ನು ಪಡೆಯ ಮುಖ್ಯಸ್ಥನ ಹೆಂಡತಿ ತಿಳಿಸಿದ ರೀತಿಯನ್ನು ವಿವರಿಸಿ.

**V. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ. (1 x 4 = 4 ಅಂಕಗಳು)**

1. ಗಂಧರ್ವ ಸೇನಾ ಯಾರು ಎಂಬುದನ್ನು ತಿಳಿಯಲು ಮಂತ್ರಿಯೂ ಮಾಡಿದ ಪ್ರಯತ್ನಗಳೇನು?

## ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

### ಪಾಠ-3: ಕೃಷ್ಣ ಸುಧಾಮ

**ತರಗತಿ: 6ನೇ ವಿಷಯ: ಕನ್ನಡ ಅಂಕಗಳು : 20 ಸಮಯ : 45 ನಿಮಿಷ**

---

**I. ಸರಿಯಾದ ಉತ್ತರ ಆರಿಸಿ ಬರೆಯಿರಿ. ವಿರುದ್ಧಾರ್ಥಕ ಪದ ಗುರುತಿಸಿ: (4 x 1 = 4 ಅಂಕಗಳು)**

1. ಕೃಷ್ಣ ಮತ್ತು ಸುಧಾಮರಿಬ್ಬರು ಪರಮ '**ಮಿತ್ರರು**'
   (ಎ. ಗೆಳೆಯ ಬಿ. ಸ್ನೇಹಿತ ಸಿ. ಶತ್ರು)
2. '**ಹತ್ತಿರ**' ಬಡತನ ಹೇಳಿ ಬೇಸರ ಉಂಟು ಮಾಡಬಾರದೆಂದು………….
   (ಎ. ಸಮೀಪ ಬಿ. ದೂರ ಸಿ. ಕಠಿಣ)
3. '**ಸುಖ**'ದ ದಿನಗಳು ನಮಗೆ ಯಾವಾಗ ಬರುತ್ತವೆ?
   (ಎ. ಸಂತೋಷ ಬಿ. ಸಿರಿತನ ಸಿ. ದುಃಖ)
4. ಕೃಷ್ಣನು ಅಪಾರವಾದ '**ಗೌರವ**' ಹೊಂದಿದ್ದನು.
   (ಎ. ಕೆಡುಕು ಬಿ. ಅಗೌರವ ಸಿ. ಹಣ)

**II. ಸ್ವಂತ ವಾಕ್ಯ ರಚಿಸಿ (4 x 1 = 4 ಅಂಕಗಳು)**

1. ಸ್ನೇಹ
2. ಆಶ್ಚರ್ಯ
3. ಸಹಾಯ
4. ಅರಮನೆ

**III. ಒಂದು ವಾಕ್ಯದಲ್ಲಿ ಉತ್ತರಿಸಿ. (4 x 1 = 4 ಅಂಕಗಳು)**

1. ಗುರುಕುಲದಲ್ಲಿ ಸುಧಾಮನಿಗೆ ಸ್ನೇಹಿತನಾದದ್ದು ಯಾರು?
2. ಶ್ರೀ ಕೃಷ್ಣನ ಹತ್ತಿರ ಸಹಾಯ ಕೇಳಿ ಎಂದು ಸುಧಾಮನಿಗೆ ಹೇಳಿದವರು ಯಾರು?
3. ಕೃಷ್ಣನನ್ನು ನೋಡಲು ಸುಧಾಮನು ಅವನಿಗಾಗಿ ಏನನ್ನು ಬಟ್ಟೆಯಲ್ಲಿ ಕಟ್ಟಿಕೊಂಡು ಹೋಗಿದ್ದನು?
4. ಸುಧಾಮನ ಮಕ್ಕಳು ಯಾವ ಕಾರಣದಿಂದ ಹಸಿವಿನಿಂದ ಬಳಲುತ್ತಿದ್ದರು?

**IV. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (2 x 2 = 4 ಅಂಕಗಳು)**

1. 'ಮಾತು ಬೆಳ್ಳಿ, ಮೌನ ಬಂಗಾರ' ಈ ಗಾದೆಯ ಅರ್ಥ ಬರೆಯಿರಿ.
2. ನುಡಿಗಟ್ಟಿನ ಅರ್ಥ ತಿಳಿಸಿ. 1. ಬೆನ್ನು ತಟ್ಟು:- 2.ಬಣ್ಣ ಕಟ್ಟು:-

**V. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ. (1 x 4 = 4 ಅಂಕಗಳು)**

1. ಶ್ರೀಕೃಷ್ಣ ಮತ್ತು ಸುಧಾಮರ ಗೆಳೆತನದ ಬಗ್ಗೆ ಬರೆಯಿರಿ.

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

## ಪಾಠ-4: ಡಾ|| ರಾಜಕುಮಾರ

**ತರಗತಿ: 6ನೇ ವಿಷಯ: ಕನ್ನಡ ಅಂಕಗಳು : 20 ಸಮಯ : 45 ನಿಮಿಷ**

---

**I. ಸರಿಯಾದ ಉತ್ತರ ಆರಿಸಿ ಬರೆಯಿರಿ. (4 x 1 = 4 ಅಂಕಗಳು)**

1. 'ಮಗು + ಅನ್ನು' ಸೇರಿಸಿ ಬರೆದಾಗ: ________(ಅ. ಮಗುನು ಬ. ಮಗುವನ್ನು ಕ. ಮಗು ಅನ್ನು)
2. 'ಗುಣ + ಇತ್ತು' ಸೇರಿಸಿ ಬರೆದಾಗ:_______ (ಅ. ಗುಣವಿತ್ತು ಬ. ಗುಣತ್ತು ಕ. ಗುಣಇತ್ತು)
3. 'ಮರವನ್ನು' ಪದವನ್ನು ಬಿಡಿಸಿ ಬರೆದಾಗ:________ (ಅ. ಮರ + ಅನ್ನು ಬ. ಮರ + ವನ್ನು ಕ. ಮರ + ನು)
4. 'ಬೆಟ್ಟದಾವರೆ' ಪದವು ಈ ಸಂಧಿಗೆ ಉದಾಹರಣೆ:_________ (ಅ. ಲೋಪ ಬ. ಆಗಮ ಕ. ಆದೇಶ)

**II. ಹೊಂದಿಸಿ ಬರೆಯಿರಿ. (4 x 1 = 4 ಅಂಕಗಳು)**

| | |
|---|---|
| 1. ಭಾರತ ಸರ್ಕಾರ - | ಅ. ಕರ್ನಾಟಕ ರತ್ನ ಪ್ರಶಸ್ತಿ |
| 2. ಕರ್ನಾಟಕ ಸರ್ಕಾರ - | ಬ. ಗೌರವ ಡಾಕ್ಟರೇಟ್ ಪದವಿ |
| 3. ಮೈಸೂರು ವಿಶ್ವವಿದ್ಯಾನಿಲಯ - | ಕ. ಬೇಡರ ಕಣ್ಣಪ್ಪ |
| 4. ಮೊದಲ ಚಿತ್ರ - | ಡ. ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ |

**III. ಒಂದು ವಾಕ್ಯದಲ್ಲಿ ಉತ್ತರಿಸಿ. (4 x 1 = 4 ಅಂಕಗಳು)**

1. ರಾಜಕುಮಾರ ರವರು ಮೊದಲು ಕೆಲಸ ಮಾಡಿದ ನಾಟಕ ಕಂಪನಿಯ ಹೆಸರೇನು?
2. ರಾಜಕುಮಾರ ಅವರ ಪತ್ನಿಯ ಹೆಸರೇನು?
3. ರಾಜಕುಮಾರ ರವರ ಗಾಯನ ಯಾವ ಸಿನಿಮಾದಿಂದ ಆರಂಭಗೊಂಡಿತು?
4. ಮುತ್ತುರಾಜ ಎಂಬ ಹೆಸರನ್ನು ರಾಜಕುಮಾರ ಎಂದು ಬದಲಿಸಿದ ನಿರ್ದೇಶಕರು ಯಾರು?

**IV. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (2 x 2 = 4 ಅಂಕಗಳು)**

1. ಡಾ. ರಾಜಕುಮಾರ್ ಅಭಿನಯದ ಸಾಮಾಜಿಕ ಚಿತ್ರಗಳನ್ನು ಹೆಸರಿಸಿ.
2. ಡಾ. ರಾಜಕುಮಾರ್ ಅವರ ಕುಟುಂಬದ ಬಗ್ಗೆ ಬರೆಯಿರಿ.

**V. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ. (1 x 4 = 4 ಅಂಕಗಳು)**

1. ಡಾ. ರಾಜಕುಮಾರ್ ಅವರ ಕನ್ನಡ ಪ್ರೀತಿಯ ಬಗ್ಗೆ ಬರೆಯಿರಿ.

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

## ಪದ್ಯ-1: ಬೇಸಿಗೆ

**ತರಗತಿ: 6ನೇ ವಿಷಯ: ಕನ್ನಡ ಅಂಕಗಳು : 20 ಸಮಯ : 45 ನಿಮಿಷ**

---

**I. ಸರಿಯಾದ ಉತ್ತರ ಆರಿಸಿ ಬರೆಯಿರಿ. (4 x 1 = 4 ಅಂಕಗಳು)**

1. 'ಭಾನು' ಪದದ ಸಮನಾರ್ಥಕ ಪದ: ____________
   (ಅ. ಸೂರ್ಯ ಬ. ಚಂದ್ರ ಕ. ಭೂಮಿ)
2. 'ಅಂ' ಎಂಬುದು:_________ (ಅ. ಅನುಸ್ವಾರ ಬ. ವಿಸರ್ಗ ಕ. ವ್ಯಂಜನ)
3. 'ಅಃ' ಎಂಬುದು:___________ (ಅ. ಅನುಸ್ವಾರ ಬ. ವಿಸರ್ಗ ಕ. ಸ್ವರ)
4. 'ಬೇಸಿಗೆ' ಪದ್ಯವನ್ನು ಬರೆದವರು: __________
   (ಅ. ಕುವೆಂಪು ಬ. ಬಿ ಆರ್ ಲಕ್ಷ್ಮಣರಾವ್ ಕ. ಬೇಂದ್ರೆ)

**II. ಹೊಂದಿಸಿ ಬರೆಯಿರಿ. (4 x 1 = 4 ಅಂಕಗಳು)**

| | |
|---|---|
| 1. ಸೂರ್ಯ - | ಅ. ರಜೆ |
| 2. ಬೇಸಿಗೆ - | ಬ. ಭೂಮಿಯ ಪೋಷಕ |
| 3. ಸಜಾ - | ಕ. ಜನನ 9-9-1946 |
| 4. ಬಿ ಆರ್ ಲಕ್ಷ್ಮಣ್ ರಾವ್ - | ಡ. ಶಿಕ್ಷೆ |

**III. ಒಂದು ವಾಕ್ಯದಲ್ಲಿ ಉತ್ತರಿಸಿ. (4 x 1 = 4 ಅಂಕಗಳು)**

1. ಸೂರ್ಯನು ಮರೆಯದೆ ಯಾವ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾನೆ?
2. ವಿದ್ಯಾರ್ಥಿಯಾಗಿ ನಿನ್ನ ಕರ್ತವ್ಯವೇನು?
3. ಬಿರುಬಿಸಿಲಿನಲ್ಲಿ ಯಾವವು ಕಂಗಾಲಾಗಲಿಲ್ಲ?
4. ಭೂಮಿಗೆ ಯಾರು ಅನಿವಾರ್ಯ?

**IV. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (2 x 2 = 4 ಅಂಕಗಳು)**

1. ಸೂರ್ಯನಿಂದ ನಾವು ಯಾವ ಪಾಠವನ್ನು ಕಲಿಯಬೇಕು?
2. ಬಿ ಆರ್ ಲಕ್ಷ್ಮಣ್ ರಾವ್ ಕವಿ ಪರಿಚಯ ಬರೆಯಿರಿ.

**V. ಪದ್ಯ ಪೂರ್ಣಗೊಳಿಸಿ. (1 x 4 = 4 ಅಂಕಗಳು)**

1. ಪದ್ಯದ ಮುಂದಿನ ಸಾಲುಗಳನ್ನು ಪೂರ್ಣಗೊಳಿಸಿ:
   ಸೂರ್ಯನಿಂದ ಕಲಿಯೋಣ
   ..............................................
   ……………………………….......
   ……………………………………
   …………ಧನ್ಯತೆ ಗಳಿಸೋಣ.

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

## ಪದ್ಯ-2: ಮಂಗಳ ಗ್ರಹದಲ್ಲಿ ಪುಟ್ಟಿ

**ತರಗತಿ: 6ನೇ ವಿಷಯ: ಕನ್ನಡ ಅಂಕಗಳು : 20 ಸಮಯ : 45 ನಿಮಿಷ**

---

**I. ಸರಿಯಾದ ಉತ್ತರ ಆರಿಸಿ ಬರೆಯಿರಿ. (4 x 1 = 4 ಅಂಕಗಳು)**

1. ಒಂದು ದಿನ ಇದ್ದಕ್ಕಿದ್ದಂತೆ ಪುಟ್ಟಿಗೆ _____ ಬಂದಿತ್ತು

   (ಅ. ರೆಕ್ಕೆಯು ಬ. ಕನಸು ಕ. ಆಸೆ)

2. ಹಾರುತ ತೇಲುತ ಮುಂದಕ್ಕೆ ಸಾಗಿ _____ ಸೇರಿದಳು

   (ಅ. ಸೂರ್ಯನ ಬ. ಚಂದ್ರನ ಕ. ನಕ್ಷತ್ರ)

3. ಪುಟ್ಟಿಯು ಕಂಡಳು ಮಂಗಳನಲ್ಲಿ _____ ಹೆಸರಿನ ಹೆಬ್ಬಂಡೆ

   (ಅ. ರಾಗಿ ಬ. ಯೋಗಿ ಕ. ಭೋಗಿ)

4. ಸೌರಮಂಡಲದ ಅತಿ ದೊಡ್ಡ ಗ್ರಹ _____

   (ಅ. ಗುರು ಗ್ರಹ ಬ. ಶನಿ ಗ್ರಹ ಕ. ಭೂಮಿ)

**II. ಹೊಂದಿಸಿ ಬರೆಯಿರಿ. (4 x 1 = 4 ಅಂಕಗಳು)**

| | |
|---|---|
| 1. ಬೇಗ ಬೇಗ - | ಅ. ಆಕಾಶ |
| 2. ಮಂಗಳ ಗ್ರಹ - | ಬ. ಜೋಡಿ ನುಡಿ |
| 3. ಆಗಸ - | ಕ. ದ್ವಿರುಕ್ತಿ |
| 4. ಮನೆ ಮಠ - | ಡ. ನಾಲ್ಕನೇ ಗ್ರಹ |

**III. ಒಂದು ವಾಕ್ಯದಲ್ಲಿ ಉತ್ತರಿಸಿ. (4 x 1 = 4 ಅಂಕಗಳು)**

1. ಪುಟ್ಟಿಗೆ ಯಾರ ಹಾಗೆ ಹಾರುವ ಮನಸ್ಸಿತ್ತು?
2. ಪುಟಾಣಿ ಪುಟ್ಟಿಗೆ ಏನು ಇಷ್ಟ?
3. ಭೂಮಿ ಪುಟಾಣಿಗೆ ಯಾವ ರೀತಿ ಕಂಡಿತು?
4. ಭೂಮಿಗೆ ಬಂದ ಪುಟ್ಟಿ ಏನು ಬೆಳೆಸಿದಳು?

**IV. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (2 x 2 = 4 ಅಂಕಗಳು)**

1. ಪುಟ್ಟಿ ಹಿಂದೊಂದು ಕಾಲದಲ್ಲಿ ಮಂಗಳ ಗ್ರಹ ಹೇಗಿತ್ತು ಎಂಬುದನ್ನು ಹೇಗೆ ತಿಳಿದುಕೊಂಡಳು?
2. ಮಂಗಳ ಗ್ರಹದಿಂದ ಭೂಮಿಗೆ ಬಂದ ಪುಟ್ಟಿ ಏನು ಮಾಡಿದಳು?

**V. ಪದ್ಯ ಪೂರ್ಣಗೊಳಿಸಿ. (1 x 4 = 4 ಅಂಕಗಳು)**

1. ಈ ಪದ್ಯ ಭಾಗವನ್ನು ಪೂರ್ಣ ಮಾಡಿರಿ:

ಆಗಸದಲ್ಲಿ ....................

……………………………..

.................... ಇದು ಕಷ್ಟ.

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

## ಪದ್ಯ-3: ನೀ ಹೋದ ಮರುದಿನ

**ತರಗತಿ: 6ನೇ ವಿಷಯ: ಕನ್ನಡ ಅಂಕಗಳು : 20 ಸಮಯ : 45 ನಿಮಿಷ**

**I. ಸರಿಯಾದ ಉತ್ತರ ಆರಿಸಿ ಬರೆಯಿರಿ. (4 x 1 = 4 ಅಂಕಗಳು)**

1. ನೀ ಹೋದ ಮರುದಿನ ಪದ್ಯ ಬರೆದ ಕವಿ:_______
   (ಅ. ಎಚ್ಎಸ್ ಶಿವಪ್ರಕಾಶ್ ಬ. ಚೆನ್ನಣ್ಣ ವಾಲೀಕಾರ ಕ. ಬಿ ಆರ್ ಲಕ್ಷ್ಮಣ್ ರಾವ್)
2. ಸಂವಿಧಾನ ಶಿಲ್ಪಿ ಎಂದು ಇವರನ್ನು ಕರೆಯುತ್ತಾರೆ:_______
   (ಅ. ಗಾಂಧೀಜಿ ಬ. ರಾಜೇಂದ್ರ ಪ್ರಸಾದ್ ಕ. ಡಾ|| ಬಿ ಆರ್ ಅಂಬೇಡ್ಕರ್)
3. 'ಮರುದಿನ' ಪದದ ಅರ್ಥವೇನು?_________
   (ಅ. ಹಿಂದಿನ ದಿನ ಬ. ಮುಂದಿನ ದಿನ ಕ. ಅದೇ ದಿನ)
4. <u>ದುಡಿದುಂಡು</u> ಹುಟ್ಟಿರಲು ಕತ್ತಲಿರುವ ತನಕ (ಅಡಿಗೆರೆ ಎಳೆದ 'ದುಡಿದುಂಡು' ಸಮನಾರ್ಥಕ): __________
   (ಅ. ಕೆಲಸ-ಕಾಯಕ ಬ. ವೃತ್ತಿ-ನಿವೃತ್ತಿ ಕ. ಕತ್ತಲು-ಬೆಳಕು)

**II. ಬಿಟ್ಟ ಸ್ಥಳ ತುಂಬಿರಿ (4 x 1 = 4 ಅಂಕಗಳು)**

1. ಪ್ರತಿನಿತ್ಯ ಎದ್ದಾಗ ನಮ್ಮ ಸುದ್ದಿ _______ ಕೇಕು ಹಾಕುವುದು ತಪ್ಪಿಲ್ಲ
2. ತಮ್ಮಂಗೆ _______ ತಲೆಕಡಿದು ಹಾಕುವರು
3. ಡಾ. ಚನ್ನಣ್ಣ ವಾಲಿಕಾರ್ ರವರು _______ ರಂದು ಜನಿಸಿದರು.
4. ರೋಡಿಗಿದ್ದವರೆಲ್ಲ _______ ಕುಂತಾರ

**III. ಒಂದು ವಾಕ್ಯದಲ್ಲಿ ಉತ್ತರಿಸಿ. (4 x 1 = 4 ಅಂಕಗಳು)**

1. ಕವಿ ಯಾವುದು ಪ್ರತಿನಿತ್ಯ ತಪ್ಪಿಲ್ಲ ನಮಗೆ ಎಂದಿದ್ದಾರೆ?
2. ತಾಳಿ ತಾಳಿ ಒಮ್ಮೆ ಏನಾಗಿ ಕುಟುಕುವನು?
3. ಕವಿ ಏನನ್ನು ಕಳೆದುಕೊಂಡ ಬರಡು ಗಿಡ ನಾವು ಎಂದಿದ್ದಾರೆ?
4. ಯಾರು ಹೋದ ಮೇಲೆ ನಮ್ಮ ಬದುಕು ಮೊದಲಿನಂತೆ ಆಗಿದೆ?

**IV. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (2 x 2 = 4 ಅಂಕಗಳು)**

1. ತರತರದ ನೋವುಗಳು ನಮಗ ಎಂದು ಹೇಳಲು ಕಾರಣವೇನು ವಿವರಿಸಿ.
2. ಸಂವಿಧಾನ ರಚನೆಯಲ್ಲಿ ಅಂಬೇಡ್ಕರ್ ರವರ ಪಾತ್ರವೇನು?

**V. ಪದ್ಯದ ಸಾರಾಂಶ ಬರೆಯಿರಿ. (1 x 4 = 4 ಅಂಕಗಳು)**

ಪ್ರತಿನಿತ್ಯ ಎದ್ದಾಗ ನಮಸುದ್ದಿ ಸಂಭ್ರಮವು
ಕೇಕುವುದು ತಪ್ಪಿಲ್ಲದ ನಮಗ
ಹೋದ ಹೋದಲ್ಲ ಮೇಲವರ ಆಟಗಳು
ಉರಿ ಹಚ್ಚಿ ಬಿಡುತ್ತಾರೆ ಒಳಗ

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

## ಪದ್ಯ-4: ಮಗು ಮತ್ತು ಹಣ್ಣುಗಳು

**ತರಗತಿ: 6ನೇ    ವಿಷಯ: ಕನ್ನಡ    ಅಂಕಗಳು : 20    ಸಮಯ : 45 ನಿಮಿಷ**

---

**I. ಸರಿಯಾದ ಉತ್ತರ ಆರಿಸಿ ಬರೆಯಿರಿ. (4 x 1 = 4 ಅಂಕಗಳು)**

1. ಪತನ ಪದದ ಅರ್ಥ: ______(ಅ. ಏಳಿಗೆ ಬ. ನಾಶ/ಬೀಳುವುದು ಕ. ಜಯ)
2. 'ಸತ್ಯವಾಯಿತು' ಪದವನ್ನು ಬಿಡಿಸಿದಾಗ:___
   (ಅ. ಸತ್ಯ+ಆಯಿತು    ಬ. ಸತ್ಯ+ವಾಯಿತು    ಕ. ಸತ್ಯವಾ+ಇತು)
3. 'ಕಣ್ಣರಳಿಸು' ಪದವನ್ನು ಬಿಡಿಸಿದಾಗ:________
   (ಅ. ಕಣ್ಣ+ರಳಿಸು    ಬ. ಕಣ್ಣು+ಅರಳಿಸು    ಕ. ಕಣ್ಣು+ರಳಿಸು)
4. 'ನಿನ್ನೊಳಗೆ' ಪದವನ್ನು ಬಿಡಿಸಿದಾಗ:________
   (ಅ. ನಿನ್ನ+ಒಳಗೆ    ಬ. ನಿನ್ನ+ಹೊರಗೆ    ಕ. ನಿನ್ನ+ಳಗೆ)

**II. ಬಿಟ್ಟ ಸ್ಥಳ ತುಂಬಿರಿ. (4 x 1 = 4 ಅಂಕಗಳು)**

1. ಎಲ್ಲರೊಳಗೊಂದು ನುಡಿ ಕಲಿತು _______ ಪರ್ವತವೆಯಾದ ಸರ್ವಜ್ಞ.
2. ಹಣ್ಣಿನ ಹಾಗೆ ಬದುಕು ಮಾಗಿದರೆ ಬಾಳು _______ ಆಗುತ್ತದೆ.
3. ಹಬ್ಬಿಕೋ _______ ಬಳ್ಳಿಯ ಹಾಗೆ
4. ಸರಿ ಗಾತ್ರವಾಗಿ ಸಮನಿಸಲಿ _______.

**III. ಒಂದು ವಾಕ್ಯದಲ್ಲಿ ಉತ್ತರಿಸಿ. (4 x 1 = 4 ಅಂಕಗಳು)**

1. ಮಗು ಕಣ್ಣನ್ನು ಎಲ್ಲಿ ಅರಳಿಸುತ್ತದೆ?
2. ಮಗು ಯಾವ ಹಣ್ಣಿನ ಹಾಗೆ ಬಾಗಬೇಕು?
3. ಅಪರೂಪದ ಹಣ್ಣು ಯಾವುದು?
4. ಎಲ್ಲರಿಗೂ ದಕ್ಕುವ ಹಣ್ಣು ಯಾವುದು?

**IV. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (2 x 2 = 4 ಅಂಕಗಳು)**

1. ಅರಳಿದ ದಾಳಿಂಬೆ ಯಾವ ರೀತಿ ಕಾಣುತ್ತದೆ?
2. ಮಗು ಬದುಕಿನಲ್ಲಿ ಯಾವ ಯಾವ ತೊಂದರೆಗಳಿಗೆ ಒಳಗಾಗಬಾರದು?

**V. ಪದ್ಯದ ಸಾರಾಂಶ ಬರೆಯಿರಿ / ಪದ್ಯ ಪೂರ್ಣಗೊಳಿಸಿ. (1 x 4 = 4 ಅಂಕಗಳು)**

1. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ:

ಕೊಬ್ಬಿದರೆ .....................
..................................
.................................
…….................. ನಿನ್ನತನ.

# --- ಮಾದರಿ ಉತ್ತರ ಪತ್ರಿಕೆಗಳು ---

## ಪಾಠ-1: ದೊಡ್ಡವರ ದಾರಿ

I. ಸರಿಯಾದ ಉತ್ತರ:

1-ಎ, 2-ಬಿ, 3-ಎ, 4-ಬಿ

II. ಬಿಟ್ಟ ಸ್ಥಳ / ಹೊಂದಿಸಿ:

1. ಕಾಸು, 2. ತಪ್ಪು, 3. ಜನಕ, 4. ಜಾಕಿರ್ ಹುಸೇನ್

III. ಒಂದು ವಾಕ್ಯದಲ್ಲಿ:

1. ಬೂಟ್ ಪಾಲಿಶ್ ಹಾಕುವವರ ವೇಷ, 2. ಪುಸ್ತಕದ ಪುಟಗಳನ್ನು ಹರಿಯುವುದು, 3. ದ್ರೌಪದಿ ಮುರ್ಮು, 4. ಶಿಸ್ತು ರೂಡಿಸಿಕೊಳ್ಳಿ

IV. ಎರಡು-ಮೂರು ವಾಕ್ಯಗಳಲ್ಲಿ:

1. ಸರಳ ಜೀವನ, ಋಷಿ ಸದೃಶ ಜೀವನ, ಶಿಸ್ತು, ಸಂಯಮ, ಸಮಯ ಪಾಲನೆ. 2. ಕನ್ನಡದ ಕವಿರತ್ನತ್ರಯರು, ವಿಶ್ವವಿಖ್ಯಾತ ಮಹಿಳೆಯರು, ನಮ್ಮ ಗಮಕಿಗಳು, ವಚನಸಾಗರ.

V. 4 ಅಂಕದ ಪ್ರಶ್ನೆಗೆ ಉತ್ತರ:

ವಿದ್ಯಾರ್ಥಿಗಳು ನೀಟಾಗಿ ಬಟ್ಟೆ ಹಾಕಿಕೊಂಡು ಬೂಟುಗಳಿಗೆ ಪಾಲಿಶ್ ಹಾಕಿಕೊಂಡು ಕಾಲೇಜಿಗೆ ಬರತೊಡಗಿದರು.

---

## ಪಾಠ-2: ಗಂಧರ್ವಸೇನ

I. ಸರಿಯಾದ ಉತ್ತರ:

1-ಸಿ, 2-ಎ, 3-ಬಿ, 4-ಎ

II. ಬಿಟ್ಟ ಸ್ಥಳ / ಹೊಂದಿಸಿ:

1-ಡ, 2-ಅ, 3-ಬ, 4-ಕ

III. ಒಂದು ವಾಕ್ಯದಲ್ಲಿ:

1. ಗಂಧರ್ವಸೇನರು ತೀರಿಕೊಂಡರಂತೆ ಎಂದನು, 2. ಎಲ್ಲರೂ ಏಕೆ ಅಳುತ್ತಿದ್ದಾರೆ?,

3. ಯಾರು ಈ ಗಂಧರ್ವ ಸೇನಾ?, 4. ಮಡಿವಾಳತಿಯ ಕತ್ತೆ

IV. ಎರಡು-ಮೂರು ವಾಕ್ಯಗಳಲ್ಲಿ:

1. ಮಂತ್ರಿ ಕೇಳಿದಾಗ ಮುಖ್ಯಸ್ಥ ತನಗೆ ಗೊತ್ತಿಲ್ಲ ತನ್ನ ಹೆಂಡತಿ ಅಳುತ್ತಿದ್ದಳು ಎಂದ. 2. ಮುಖ್ಯಸ್ಥನ ಹೆಂಡತಿ ತನಗೆ ಮಡಿವಾಳತಿಯಿಂದ ತಿಳಿಯಿತು ಎಂದಳು.

V. 4 ಅಂಕದ ಪ್ರಶ್ನೆಗೆ ಉತ್ತರ:

ಮಂತ್ರಿ ಮೊದಲು ಪಡೆಯ ಮುಖ್ಯಸ್ಥನನ್ನು ಕೇಳಿದನು, ನಂತರ ಅವನ ಹೆಂಡತಿಯನ್ನು ವಿಚಾರಿಸಿದನು, ಕೊನೆಗೆ ಮಡಿವಾಳತಿಯನ್ನು ವಿಚಾರಿಸಿದಾಗ ಗಂಧರ್ವ ಸೇನಾ ಕತ್ತೆ ಎಂದು ತಿಳಿಯಿತು.

---

## ಪಾಠ-3: ಕೃಷ್ಣ ಸುಧಾಮ

I. ಸರಿಯಾದ ಉತ್ತರ:

1-ಸಿ, 2-ಬಿ, 3-ಸಿ, 4-ಬಿ

II.ಸ್ವಂತ ವಾಕ್ಯ:

1. -4. ವಿದ್ಯಾರ್ಥಿಗಳ ಅಭಿವ್ಯಕ್ತಿ

III. ಒಂದು ವಾಕ್ಯದಲ್ಲಿ:

1. ಕೃಷ್ಣ, 2. ಸುಧಾಮನ ಹೆಂಡತಿ, 3. ಅವಲಕ್ಕಿ, 4. ಬಡತನದಿಂದ/ಆಹಾರವಿಲ್ಲದೆ

IV. ಎರಡು-ಮೂರು ವಾಕ್ಯಗಳಲ್ಲಿ:

1. ಮನುಷ್ಯ ಅರಿತು ಮಾತನಾಡಬೇಕು, ಮೌನದಿಂದ ಇದ್ದರೆ ಬೆಲೆ ಹೆಚ್ಚು. 2. ಬಡತನದಿಂದ ಮಕ್ಕಳು ಹಸಿವಿನಿಂದ ಬಳಲುತ್ತಿದ್ದರಿಂದ.

V. 4 ಅಂಕದ ಪ್ರಶ್ನೆಗೆ ಉತ್ತರ:

ಕೃಷ್ಣ ಮತ್ತು ಸುಧಾಮರದ್ದು ಭೇದವಿಲ್ಲದ ಸ್ನೇಹ. ಕಷ್ಟದಲ್ಲಿದ್ದಾಗ ಕೃಷ್ಣ ಅರಮನೆ ಕಟ್ಟಿಸಿಕೊಟ್ಟನು. ಗೆಳೆಯನ ಮನದ ಇಂಗಿತ ಅರಿತು ಸಹಾಯ ಮಾಡುವುದು ನಿಜವಾದ ಸ್ನೇಹ.

---

## ಪಾಠ-4: ಡಾ|| ರಾಜಕುಮಾರ

I. ಸರಿಯಾದ ಉತ್ತರ:

1-ಬ, 2-ಅ, 3-ಅ, 4-ಕ

II. ಬಿಟ್ಟ ಸ್ಥಳ / ಹೊಂದಿಸಿ:

1-ಡ, 2-ಅ, 3-ಬ, 4-ಕ

III. ಒಂದು ವಾಕ್ಯದಲ್ಲಿ:

1. ಗುಬ್ಬಿ ವೀರಣ್ಣ ನಾಟಕ ಕಂಪನಿ, 2. ಪಾರ್ವತಮ್ಮ, 3. ಸಂಪತ್ತಿಗೆ ಸವಾಲ್, 4. ಎಚ್.ಎಲ್.ಎನ್ ಸಿಂಹ

IV. ಎರಡು-ಮೂರು ವಾಕ್ಯಗಳಲ್ಲಿ:

1. ಸಂಧ್ಯಾ ರಾಗ, ಸನಾದಿ ಅಪ್ಪಣ್ಣ, ಜೀವನ ಚೈತ್ರ, ಕಸ್ತೂರಿ ನಿವಾಸ ಇತ್ಯಾದಿ.
2. ಐದು ಜನ ಮಕ್ಕಳು: ರಾಘವೇಂದ್ರ, ಶಿವರಾಜ್, ಪುನೀತ್, ಲಕ್ಷ್ಮಿ, ಪೂರ್ಣಿಮಾ.

V. 4 ಅಂಕದ ಪ್ರಶ್ನೆಗೆ ಉತ್ತರ:

ನಟರಾಗಿ ಮಾತ್ರವಲ್ಲದೆ ಕನ್ನಡ ಪ್ರೀತಿಗಾಗಿಯೂ ಹೆಸರುವಾಸಿ. ಗೋಕಾಕ ಚಳುವಳಿಗೆ ಧುಮುಕಿ ಕನ್ನಡಿಗರ ಹೋರಾಟಕ್ಕೆ ಬಲತಂದರು.

---

# ಪದ್ಯ-1: ಬೇಸಿಗೆ

I. ಸರಿಯಾದ ಉತ್ತರ:

1-ಅ, 2-ಅ, 3-ಬ, 4-ಬ

II. ಬಿಟ್ಟ ಸ್ಥಳ / ಹೊಂದಿಸಿ:

1-ಬ, 2-ಅ, 3-ಡ, 4-ಕ

III. ಒಂದು ವಾಕ್ಯದಲ್ಲಿ:

1. ಬೆಳಕನ್ನು ನೀಡುವ ಕರ್ತವ್ಯ, 2. ಓದುವುದು ಶಾಲೆಗೆ ತಪ್ಪದೆ ಹಾಜರಾಗುವುದು, 3. ಮರ, ಗಿಡ, ಪೊದೆ, ಬಳ್ಳಿಗಳು, 4. ಸೂರ್ಯ

IV. ಎರಡು-ಮೂರು ವಾಕ್ಯಗಳಲ್ಲಿ:

1. ಸೂರ್ಯನಂತೆ ಕರ್ತವ್ಯ ಮರೆಯದೆ, ಕಷ್ಟಗಳಿಗೆ ಹೆದರದೆ ಧೈರ್ಯದಿಂದ ಎದುರಿಸಬೇಕು. 2. ಜನನ 9-9-1946 ಚೀಮಂಗಲ. ಕೃತಿ: ಗೋಪಿ ಮತ್ತು ಗಾಂಡಲೀನ, ಭಲೇ ಮಲ್ಲೇಶಿ.

V. 4 ಅಂಕದ ಪ್ರಶ್ನೆಗೆ ಉತ್ತರ:

ಪ್ರಕೃತಿಯಂತೆ ನಲಿಯೋಣ
ಕಷ್ಟಗಳಿಗಂಜದೆ
ನಮ್ಮ ಕರ್ತವ್ಯ ಮರೆಯದೆ
ನಲಿಯುತ ಬಾಳಿ ನಲಿವನ್ನು ಹಂಚಿ

------------------------------------------------------------------------------------

## ಪದ್ಯ-2: ಮಂಗಳ ಗ್ರಹದಲ್ಲಿ ಪುಟ್ಟಿ

I. ಸರಿಯಾದ ಉತ್ತರ:

1-ಅ, 2-ಬ, 3-ಬ, 4-ಅ

II. ಬಿಟ್ಟ ಸ್ಥಳ / ಹೊಂದಿಸಿ:

1-ಕ, 2-ಡ, 3-ಅ, 4-ಬ

III. ಒಂದು ವಾಕ್ಯದಲ್ಲಿ:

1. ಹಕ್ಕಿಯ ಹಾಗೆ, 2. ಆಗಸದಲ್ಲಿ ಹಾರುವುದೆಂದರೆ, 3. ನೇರಳೆ ಬಣ್ಣದ ಚೆಂಡಿನ ಹಾಗೆ, 4. ಎಳೆ ಸಸಿಗಳ

IV. ಎರಡು-ಮೂರು ವಾಕ್ಯಗಳಲ್ಲಿ:

1. ಯೋಗಿ ಹೆಸರಿನ ಹೆಬ್ಬಂಡೆಯಿಂದ ತಿಳಿದುಕೊಂಡಳು. 2. ಹಸಿರನ್ನು ಉಳಿಸಲು ಬೇಡಿಕೊಂಡಳು, ಎಳೆ ಸಸಿಗಳನ್ನು ನೆಟ್ಟು ಕುಣಿದಾಡಿದಳು.

V. 4 ಅಂಕದ ಪ್ರಶ್ನೆಗೆ ಉತ್ತರ:

ಹಾರುವುದೆಂದರೆ
ಪುಟಾಣಿ ಪುಟ್ಟಿಗೆ ಬಲು ಇಷ್ಟ
ರೆಕ್ಕೆಗಳಿಲ್ಲದೆ ಹಾರಲು ಹೋದರೆ
ಆಗದೆ ತೊಂದರೆ

------------------------------------------------------------------------------------

## ಪದ್ಯ-3: ನೀ ಹೋದ ಮರುದಿನ

I. ಸರಿಯಾದ ಉತ್ತರ:

1-ಬ, 2-ಕ, 3-ಬ, 4-ಅ

II. ಬಿಟ್ಟ ಸ್ಥಳ / ಹೊಂದಿಸಿ:

1. ಸಂಭ್ರಮವು, 2. ಇರದಿದ್ದೆ, 3. 1943, 4. ಗ್ರ್ಯಾಡ್ಯಾಗ

III. ಒಂದು ವಾಕ್ಯದಲ್ಲಿ:

1. ಸಂಭ್ರಮದ ಕೇಕೆ, 2. ಚೇಳಾಗಿ, 3. ಜ್ಞಾನೇಂದ್ರಿಯಗಳನ್ನು ಕಳಕೊಂಡ, 4. ಡಾ. ಬಿ ಆರ್ ಅಂಬೇಡ್ಕರ್

IV. ಎರಡು-ಮೂರು ವಾಕ್ಯಗಳಲ್ಲಿ:

1. ದಲಿತರು ಸ್ವಾತಂತ್ರ್ಯ, ಸಂವಿಧಾನ ಬಂದರೂ ಶೋಷಣೆ ಅನುಭವಿಸುತ್ತಿದ್ದಾರೆ.
2. ಇಡೀ ಸಂವಿಧಾನದ ರೂಪುರೇಷೆಗಳನ್ನು ಸಿದ್ಧಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

V. 4 ಅಂಕದ ಪ್ರಶ್ನೆಗೆ ಉತ್ತರ:

ಪ್ರತಿದಿನ ಎದ್ದಾಗ ನಮಗೆ ಸಂತೋಷ ಸಿಗುವುದೆಂಬ ಭ್ರಮೆ ತಪ್ಪಿಲ್ಲ. ಯಾವುದೇ ಕೆಲಸ ಮಾಡಲು ಹೋದರೂ ಮೇಲ್ವರ್ಗದವರ ಮಾತು ಕೇಳಬೇಕು, ಇಲ್ಲದಿದ್ದರೆ ಶೋಷಿಸುತ್ತಾರೆ.

---

## ಪದ್ಯ-4: ಮಗು ಮತ್ತು ಹಣ್ಣುಗಳು

I. ಸರಿಯಾದ ಉತ್ತರ:

1-ಬ, 2-ಅ, 3-ಬ, 4-ಅ

II. ಬಿಟ್ಟ ಸ್ಥಳ / ಹೊಂದಿಸಿ:

1. ವಿದ್ಯೆಯ, 2. ರಸಭರಿತ, 3. ದ್ರಾಕ್ಷಿ, 4. ನಿನ್ನತನ

III. ಒಂದು ವಾಕ್ಯದಲ್ಲಿ:

1. ಹಣ್ಣಿನ ಅಂಗಡಿಯ ಮುಂದೆ, 2. ಪಕ್ವಗೊಂಡ ಬಾಳೆಯ ಹಣ್ಣಿನ, 3. ಅಂಜೂರ, 4. ಕಲ್ಲಂಗಡಿ

IV. ಎರಡು-ಮೂರು ವಾಕ್ಯಗಳಲ್ಲಿ:

1. ತಳ ತಳ ಹೊಳೆಯುವ ಕೆಂಪು ಬಣ್ಣದ ಮಣಿಯಂತೆ. 2. ಕಪ್ಪು ಲಾರಿಗೆ ಬಲಿಯಾಗಬಾರದು, ಕಲ್ಲಿಗೆ ಉದುರಬಾರದು.

V. 4 ಅಂಕದ ಪ್ರಶ್ನೆಗೆ ಉತ್ತರ:

ಚಕೋತನೆಯ ಹಾಗೆ
ಕುಗ್ಗಿದರೆ ನಿಂಬೆಹಣ್ಣಿನ ಹಾಗೆ
ಹುಳಿಗಟ್ಟುವುದು ನಿನ್ನೊಳಗೆ
ಸರಿ ಗಾತ್ರವಾಗಿ ಸಮನಿಸಲಿ

# ಕೊಡುಗೆ:

## ಜಿಪಿಟಿ ಶಿಕ್ಷಕರ ಶೈಕ್ಷಣಿಕ ಸಂಪನ್ಮೂಲಗಳು,ಉತ್ತ ರ ಕನ್ನ ಡ

( https://chandugokarna-bit.github.io/gpt-teachers-resources/# )